**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

ಸಿ.ಸಿ. ಸಂಖ್ಯೆ: **21/2022**

ಹೆಸರುಃ ಚಂದ್ರಶೇಖರ್ ಕೆ ಎನ್ ಸಿ.ಡಬ್ಲ್ಯೂ: 11

ವಯಸ್ಸುಃ 36 ವರ್ಷ ಪಿ.ಡಬ್ಲ್ಯೂ: 6

ತಂದೆಃ ನರಸಿಂಹನಾಯ್ಕ

ಉದ್ಯೋಗಃ ಪಿ ಎಸ್ ಐ

ವಾಸ ಸ್ಥಳ ಚನ್ನಗಿರಿ

ಸಾಕ್ಷಿಗೆ ದಿನಾಂಕಃ 29.06.2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಅಅಠವರಿಂದ ಮುಖ್ಯ ವಿಚಾರಣೆ

ದಿಃ 05.10.2021 ರಿಂದ ಇಲ್ಲಿಯವರೆಗೆ ನಾನು ಪಿ ಎಸ್ ಐ ಆಗಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 20.10.2021 ರಂದು ನಾನು ಬೆಳಗ್ಗೆ 7.30 ರ ಸಮಯದಲ್ಲಿ ಚಾಸಾ 6 ಮತ್ತು 7 ರವರ ಜೊತೆಗೆ ವಿಶೇಷ ಬೆಳಗಿನ ಗಸ್ತಿಗೆ ಹೋದಾಗ ಹೊನ್ನೆಬಾಗಿ ಕಡೆಯಿಂದ ಒಂದು ಮೊಟಾರ್ ಬೈಕ್ ಸಂ. ಕೆಎ 17 ಇ ಬಿ 4087 ನ್ನು ಚಲಾಯಿಸಿಕೊಂಡು ಒಬ್ಬ ಅಸಾಮಿ ಚನ್ನಗಿರಿ ಕಡೆಗೆ ಬರುತ್ತಿದ್ದವನನ್ನು ತಪಾಸಣೆ ಒಳಪಡಿಸಿದಾಗ ಆತ ತನ್ನ ಹೆಸರು ಮತ್ತು ವಿಳಾಸವನ್ನು ಸರಿಯಾಗಿ ನೀಡದೆ ಬೈಕ್ ನ್ನು ಬಿಟ್ಟು ಪರಾರಿಯಾಗಲು ಪ್ರಯತ್ನಿಸಿದ. ಆಗ ನಾನು ಮತ್ತು ನನ್ನ ಸಿಬ್ಬಂದಿಯವರು ಹಿಡಿದುಕೊಂಡು ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಸುರೇಶ ಯಾನೆ ಎಕ್ಕನಹಳ್ಳಿ ಸೂರಿ ಯಾನೆ ಜಾನಿ ಬಿನ್ ಬಸವರಾಜಪ್ಪ, ಎಕ್ಕನಹಳ್ಳಿ ಗ್ರಾಮ, ಹೊನ್ನಾಳಿ ತಾಲ್ಲೂಕು ಎಂದು ತಿಳಿಸಿರುತ್ತಾನೆ. ಆತ ಚಲಾಯಿಸುತ್ತಿದ್ದ ವಾಹನದ ದಾಖಲೆ ಕೇಳಲಾಗಿ ಆತನ ಸರಿಯಾದ ಮಾಹಿತಿ ನೀಡಲಿಲ್ಲ. ಆತನನ್ನು ಕುಲಂಕುಷವಾಗಿ ವಿಚಾರಣೆ ಮಾಡಲಾಗಿ ದಿಃ 19.09.2021 ರಂದು ರಾತ್ರಿ 1.30 ರ ಸಮಯದಲ್ಲಿ ಚನ್ನಗಿರಿ ತಾಲ್ಲೂಕಿನ ಕಬ್ಬಳ ಗ್ರಾಮದ ಒಂದು ಮನೆಯ ಮುಂದೆನಿಲ್ಲಿಸಿದ್ದ ಮೊಟಾರ್ ಬೈಕ್ ನ್ನು ಕೀಲಿಯನ್ನು ಡೈರೆಕ್ಟ್ ಮಾಡಿ ಕಳ್ಳತನಮಾಡಿಕೊಂಡು ತನ್ನ ಬಳಿ ಇಟ್ಟುಕೊಂಡಿದ್ದ. ನಂತರ ಹೆಚ್ಚಿನ ವಿಚಾರಣೆ ಮಾಡಲಾಗಿ ದಿಃ 30.08.2021 ರಂದು ಮಧ್ಯರಾತ್ರಿ ಸುಮಾರು 12.00 ರ ಸಮಯದಲ್ಲಿ ಚನ್ನಗಿರಿ ತಾಲ್ಲೂಕಿನ ಗೊಪ್ಪೇನಹಳ್ಳಿ ಗ್ರಾಮದ ಹೈಸ್ಕೂಲ್ ಪಕ್ಕ ಇರುವ ಬಿ ಎಸ್ ಎನ್ ಎಲ್ ಕಚೇರಿಯ ಕಿಟಕಿ ಗಾಜು ಹೊಡೆದು ಒಳ ಪ್ರವೇಶ ಮಾಡಿ ಅದರಲ್ಲಿದ್ದ 7 ಮೀ ಕಾಪರ್ ಕೇಬಲ್ ನ್ನು ಕಳ್ಳತನಮಾಡಿರುವುದಾಗಿ ಮತ್ತು ಅದನ್ನು ಹಳೇ ಪ್ಲಾಸ್ಟೀಕ್ ಕಬ್ಬಿಣ ವಸ್ತು ಖರೀದಿಸುವವರ ಕಡೆ 6000/- ರೂಗಳಿಗೆ ಮಾರಾಟ

ಮಾಡಿರುವುದಾಗಿ ಹೇಳಿದ. ನಂತರ ದಿಃ22.09.2021 ರಂದು ಮಧ್ಯರಾತ್ರಿ 1.30 ರಸಮಯದಲ್ಲ್ಲಿ ಚನ್ನಗಿರಿ ತಾಲ್ಲೂಕಿನ ಗೊಪ್ಪೇನಹಳ್ಳಿ ಗ್ರಾಮದ ಬೀಗ ಹಾಕಿದ ಮನೆಯಲ್ಲಿ ಬೀಗ ಮುರಿದು ಒಳಗೆ ಪ್ರವೇಶ ಮಾಡಿ ಗಾಡ್ರೇಜ್ ಬೀರುವಿನ ಬೀಗ ಮುರಿದು ಅದರಲ್ಲಿದ್ದ ಸುಮಾರು 5 ಗ್ರಾಂ ತೂಕದ ಒಂದು ಜೊತೆ ಬಂಗಾದ ಕಿವಿ ಓಲೆ, ಸುಮಾರು 5 ಗ್ರಾಂ ತೂಕದ ಒಂದು ಬಂಗಾರದ ಉಂಗುರ ಹಾಗೂ 55000/- ನಗದು ಹಣವನ್ನು ಕಳ್ಳತನಮಾಡಿರುವುದಾಗಿ ಒಪ್ಪಿಕೊಂಡಿರುತ್ತಾನೆ. ಸದರಿಯವುಗಳನ್ನು ಮಾರಾಟ ಮಾಡುವ ಇಚ್ಚೆಯಿಂದ ತನ್ನಬಳಿ ಇಟ್ಟುಕೊಂಡಿರುತ್ತೇನೆ ಎಂದು ಹೇಳಿದ. ಕಾಪರ್ ವೈರ್ ಮಾರಾಟ ಮಾಡಿ ಬಂದ ಹಣದಲ್ಲಿ 4,000/- ರೂಗಳನ್ನು ಖರ್ಚುಮಾಡಿರುತ್ತೇನೆ ಉಳಿದ 2,000/- ಹಣವನ್ನು ತನ್ನ ಪ್ಯಾಂಟಿನ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ಹೇಳಿದ. ಮುಂದುವರೆದು 55,000/- ರೂ ನಲ್ಲಿ 50,000/- ಗಳನ್ನು ಖರ್ಚುಮಾಡಿ 5,000/- ರೂಗಳನ್ನು ತನ್ನ ಬಳಿ ಇಟ್ಟುಕೊಂಡಿರುವುದಾಗಿ ಹೇಳಿದ. ಆತನ ಹೇಳಿಕೆಯ ಆದಾರದ ಮೇಲೆ ಚನ್ನಗಿರಿ ಪೊಲೀಸ್ ಠಾಣಾ ಗುನ್ನೆ ಸಂ. 348/2021 ಕಲಂ 457,380 ಐ ಪಿಸಿ ರಡಿಯಲ್ಲಿ ಹಾಗೂ ಅದೇ ಠಾಣೆಯ ಅಪರಾದ ಸಂ.311/2021 ರಡಿಯಲ್ಲಿ ಕಲಂ 457,380 ಐ ಪಿಸಿ ರಂತೆ ಪ್ರಕರಣಗಳು ದಾಖಲಾಗಿ ತನಿಖೆಯಲ್ಲಿ ಇರುವುದು ಗೊತ್ತಾಯಿತು. ಅದೇ ರೀತಿ ಆರೋಪಿ ಉಪಯೋಗಿಸುತ್ತಿದ್ದ ಮೊಟಾರ್ ಬೈಕ್ ಕಳ್ಳತನದ ವಿಷಯವಾಗಿ ಬಸವಪಟ್ಟಣ ಪೊಲೀಸ್ ಠಾಣಾ ಗುನ್ನೆ ಸಂ.127/2021 ತನಿಖೆಯಲ್ಲಿರುವುದು ತಿಳಿದುಬಂತು. ನಂತರ ಆರೋಪಿಯನ್ನು ಬೆಳಗ್ಗೆ 8.00 ಗಂಟೆಗೆ ಠಾಣೆಯಲ್ಲಿ ದಸ್ತಗಿರಿ ನಿಯಮಾವಳಿ ಜರುಗಿಸಿ ದಸ್ತಗಿರಿ ಮಾಡಿರುತ್ತೇನೆ. ಆ ಕಾಲಕ್ಕೆ ಆರೋಪಿ ಕೊಟ್ಟ ಸ್ವಇಚ್ಚಾ ಹೇಳಿಕೆಯನ್ನು ಪಡೆದಿರುತ್ತೇನೆ.

ನಂತರ ಪಂಚರಾದ ಚಾಸಾ 4 ಮತ್ತು 5 ರವರ ಸಮಕ್ಷಮ ಆರೋಪಿಯನ್ನು ವಶಕ್ಕೆ ಪಡೆದ ತಾವರೆಕೆರೆಯ ಕ್ರಾಸ್ ಹತ್ತಿರ ಸ್ಥಳ ಹಾಗೂ ಅಮಾನತ್ತು ಪಂಚನಾಮೆ ಮಾಡಿರುತ್ತೇನೆ. ಸಾಕ್ಷಿಯು ನಿಪಿ 4 ರಿಂದ 8 ರಂತೆ ಇರುವ ಅಮಾನತ್ತು ಪಂಚನಾಮೆ ಹಾಗುಾ ಆಕಾಲಕ್ಕೆ ತೆಗೆದ ಬಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ 4 ನ್ನು ಬೆಳಗ್ಗೆ 8.00 ರಿಂದ 9.00 ರವರೆಗೆ ಮಾಡಲಾಗಿರುತ್ತದೆ. ಆ ಕಾಲಕ್ಕೆ ಆರೋಪಿಯ ಕಡೆಯಿಂದ ಒಟ್ಟು 7,000/- ರೂ ಕಳ್ಳತನದ ಹಣ, ಮೊಟಾರ್ ಬೈಕ್ ಮತ್ತು ಬಂಗಾರದ 2 ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಅದೇ ದಿನ ಬೆಳಗ್ಗೆ 10.30 ರಿಂದ 11.156 ರವರೆಗೆ ಆರೋಪಿ ತೋರಿಸಿದ ಗೊಪ್ಪೇನಹಳ್ಳಿಯ ಬಿ ಎಸ್ ಎನ್ ಎಲ್ ಕಚೇರಿಯ ಮುಂಭಾಗದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಮಹಜರ್ ಮಾಡಿರುತ್ತೇನೆ. ನಿಪಿ 9 ರಂತೆ ಇರುವ ದಾಖಲೆಯಲ್ಲಿನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ 9 ಸಿ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಬಾವಚಿತ್ರವನ್ನು ತೆಗೆಸಿರುತ್ತೇನೆ. ಅದನ್ನು ಈಗಾಗಲೇ

ನಿಪಿ 10 ಎಂದು ಗುರುತಿಸಲಾಗಿದ್ದು ಸಹಿಯನ್ನು ನಿಪಿ 10 ಎ ಎಂದು ಗುರುತಿಸಲಾಯಿತು. ಈ ಬಗ್ಗೆ ವಿವರವಾದ ವರದಿಯನ್ನು ಚಾಸಾ 12 ರವರಿಗೆ ದಾಖಲೆಗಳ ಸಮೇತ ಸಲ್ಲಿಸಿರುತ್ತೇನೆ. ನಾನು ದಿಃ20.10.2021 ರಂದು ದಾಖಲಮಾಡಿಕೊಂಡ ಆರೋಪಿಯ ಸ್ವಇಚ್ಛಾ ಹೇಳಿಕೆಯ ಪ್ರತಿಯನ್ನು ನೋಡುತ್ತಿದ್ದ ಅದರ ಮೂಲ ಪ್ರತಿ ಸಿಆರ್ ಸಂ.348/2021 ರಲ್ಲಿ ಇರುತ್ತದೆ. ಸಾಕ್ಷಿಯು ಸ್ವಇಚ್ಛಾ ಹೇಳಿಕೆಯ ಭಾಗಗಳನ್ನು ಗುರುತಿಸಿ ನುಡಿದ ಕಾರಣ ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಕಾರಣ ಸ್ವಇಚ್ಛಾ ಹೇಳಿಕೆಯ ನಕಲನ್ನು ನಿಪಿ 11 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ದೃಶ್ಯ ಸಮ್ಮೇಳನದ ಮೂಲಕ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಮು ಮಾ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮು. ಮಾ. 5 ರಿಂದ 8 ರಲ್ಲಿರುವ ಮು. ಮಾಲನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ

ಆರೋಪಿ ಹೊನ್ನೆಬಾಗಿ ಗ್ರಾಮದಲ್ಲಿ ಯಾವ ದಿಕ್ಕಿನಿಂದ ಯಾವ ದಿಕ್ಕಿನ ಕಡೆಗೆ ಹೋಗುತ್ತಿದ್ದ ಎಂದು ನಿಪಿ 4 ರಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ನಮೂಸಿದ್ದೇನೆ ಎಂದು ನುಡಿಯುತ್ತಾರೆ. ಆತ ಹೋಗುತ್ತಿದ್ದ ದಿಕ್ಕನ್ನು ನಿಖರವಾಗಿ ನಮೂದಿಸಿಲ್ಲ. ಆರೋಪಿಯ ಮೇಲೆ ಇದೆ ನ್ಯಾಯಾಲಯದಲ್ಲಿ ಸಿಸಿ 601/2022 ಹಾಗೂ ಸಿಸಿ 36/2022 ರಂತೆ ಪ್ರಕರಣಗಳು ಚಾಲ್ತಿಯಲ್ಲಿವೆ ಎಂದರೆ ಸರಿ. ಆರೋಪಿ ಯಾವುದೆ ಗುನ್ನೆ ಮಾಡದೆ ಇದ್ದರು ಸಹ ನಮ್ಮ ಠಾಣ ಆಂಕಿ ಸಂಖ್ಯೆಗಳಿಗೊಸ್ಕರ ಆರೋಪಿ ಪತ್ತೆಯಾಗದ ಪ್ರಕರಣಗಳಲ್ಲಿನ ಮು. ಮಾಲುಗಳನ್ನು ಉಪಯೋಗಿಸಿಕೊಂಡು ಸುಳ್ಳು ವರದಿ ತಯಾರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕಾಪರ್ ವೈರ್ ನ್ನು ಯಾರಿಗೆ ಮಾರಾಟ ಮಾಡಿದ ಎಂದು ವಿಚಾರಿಸಿದ್ದೇನೆ. ಆತ ಅಪರಿಚಿತ ವ್ಯಕ್ತಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ಆರೋಪಿಯಿಂದ ನಾವು ಯಾವುದೆ ಹಣವಾಗಲೀ, ವಡವೆಗಳಾಗಲೀ ಮತ್ತು ವಾಹನವಾಗಲೀ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೆ ಸ್ಥಳಕ್ಕೆ ಹೋಗದ ಠಾಣೆಯಲ್ಲಿ ಕುಳಿತು ನಿಪಿ 4 ಮತ್ತು 9 ನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೆ ಸ್ವಇಚ್ಛಾ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ ಹೇ ಕೆ ಸರಿ ಇದೆ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,
ಚನ್ನಗಿರಿ.